ಸಿ.ಸಿ .ನಂ. 65/2022 ಪಿಡಬ್ಲೂಃ 1

ದಿನಾಂಕಃ 09-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಸ್ ಆರ್ ಎಸ್ ವಕೀಲರಿಂದಃ**

8. ನಾನು ವಕೀಲರ ಮೂಲಕ ನೀಡಿದ ನೋಟಿಸು ಆರೋಪಿಗೆ ತಲುಪಿಲ್ಲ ಎಂದರೆ ಸಾಕ್ಷಿ ಅವರು ನೋಟಿಸನ್ನು ತೆಗೆದುಕೊಂಡಿಲ್ಲ ಎಂದು ನುಡಿದಿರುತ್ತಾರೆ . ಆರೋಪಿ ಹೊರಗಡೆ ಹೋಗಿರುವುದನ್ನು ನೋಡಿಯೇ ಬುದ್ಧ್ಯಾಪೂರ್ವಕ ನೋಟಿಸನ್ನು ಕಳಿಸಿದ್ದೇವೆ ಎಂದರೆ ಸರಿಯಲ್ಲ . ನೋಟಿಸು ಆರೋಪಿಗೆ ಜಾರಿಯಾಗದಂತೆ ನೋಡಿಕೊಳ್ಳಲು ನಾನು ಯಶಸ್ವಿಯಾಗಿದ್ದೇನೆ ಎಂದರೆ ಸುಳ್ಳು . ಆರೋಪಿ ನನಗೆ ಚೆಕ್ ನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ . ಬೇರೆಯವರಿಗೆ ನೀಡಿದಂತಹ ಚೆಕ್ ನ್ನು ನಾನು ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸುಳ್ಳು . ಚೆಕ್ ನಲ್ಲಿ ನಮೂದಿಸಿದಷ್ಟು ಹಣವನ್ನು ಆರೋಪಿಗೆ ಕೊಡಲು ನಾನು ಅರ್ಹನಾಗಿರಲಿಲ್ಲ ಎಂದರೆ ಸರಿಯಲ್ಲ . ಈ ಕೇಸಿಗೆ ಸಂಬಂಧಪಟ್ಟಂತೆ ಹಾಜರು ಪಡಿಸುತ್ತೇನೆ ಎಂದು ಹೇಳಿರುವ ದಾಖಲಾತಿಗಳನ್ನು ನಾನು ಹಾಜರು ಪಡಿಸಲು ಬದ್ಧನಾಗಿರುತ್ತೇನೆ ಎಂದರೆ ಸರಿ . ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿ ನಾನು ಹೇಳಿದಂತಹ ಯಾವುದೇ ಆರೋಪವನ್ನು ಎಸಗಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.